ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):-

ಅ) ಬಂದಿದೆ.

ಆ) ಹುಳಿಯಾರದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸುವ ಸಲುವಾಗಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ 1991-92ನೇ ಸಾಲಿನಲ್ಲಿ ಸಂಯೋಜನಾ ಶುಲ್ಕ ಪಾವತಿ ಮಾಡಲಾಗಿದೆ. 1992-93ನೇ ಸಾಲಿನಲ್ಲಿ ಈ ಬಗ್ಗೆ ಪರಿಶೀಲಿಸಲಾಗುವುದು.

ಕೊಡಸಳ್ಳಿ ಜಲವಿದ್ಯುತ್ ಯೋಜನೆಯ ನಿರಾಶ್ರಿತರ ಪುನರ್ವಸತಿ ಕಾರ್ಯ ಸ್ಥಗಿತಗೊಂಡಿರುವ ಬಗ್ಗೆ

430(607). ಶ್ರೀ ಉಮೇಶ್ ಭಟ್ (ಅಂಕೋಲ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಕೊಡಸಳ್ಳಿ ಜಲ ವಿದ್ಯುತ್ ಯೋಜನೆಯ ನಿರಾಶ್ರಿತರ ಪುನರ್‌ವಸತಿ ಕಾರ್ಯ ಸ್ಥಗಿತಗೊಂಡಿರಲು ಕಾರಣವೇನು? ಪುನರ್ ವಸತಿ ಕಾರ್ಯ ಪೂರ್ಣಗೊಳಿಸಲು ಎಷ್ಟು ಕಾಲಾವಕಾಶ ಬೇಕಾಗಬಹುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ಕರ್ನಾಟಕ ವಿದ್ಯುತ್ ನಿಗಮ, ಕೊಡಸಳ್ಳಿ ಜಲಾಶಯದಡಿ ನಿರಾಶ್ರಿತರಾದ ಜನಗಳ ಅನುಕೂಲಕ್ಕೆ ನಿರಾಶ್ರಿತರ ಕೇಂದ್ರವನ್ನು ಸ್ಥಾಪಿಸಲು ತನಗೆ ಸರ್ಕಾರ ಬಿಡುಗಡೆ ಮಾಡಿದ್ದ 1514:11(ಎ.ಗುಂ.) ಜಮೀನಿನಲ್ಲಿ ಪ್ರಯತ್ನ ಪಟ್ಟಾಗ ಅರಣ್ಯ ಇಲಾಖೆ, ಸದರಿ ಜಮೀನು ತನಗೆ ಸೇರಿದ್ದೆಂದು ಹೇಳಿ ತಡೆದ ಕಾರಣ, ಪುನರ್ವಸತಿ ಕಾರ್ಯ ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದು, ದಿನಾಂಕ: 31-1-1992 ರಂದು ಸರ್ಕಾರ (ಅರಣ್ಯ ಇಲಾಖೆ) ಈ ಬಗ್ಗೆ ಸ್ಥಳೀಯ ಅರಣ್ಯ ಇಲಾಖಾಧಿಕಾರಿಗಳಿಗೆ 777.00 ಎಕರೆ ಜಮೀನನ್ನು ಕರ್ನಾಟಕ ವಿದ್ಯುತ್ ನಿಗಮಕ್ಕೆ ಮೇಲ್ಕಂಡ ಉದ್ದೇಶಕ್ಕಾಗಿ ವಹಿಸಿಕೊಡಲು ಆದೇಶ ಕೊಟ್ಟಿರುವ ಕಾರಣ ನಿರಾಶ್ರಿತರ ಕೇಂದ್ರ ಸ್ಥಾಪಿಸಲು ಕರ್ನಾಟಕ ವಿದ್ಯುತ್ ನಿಗಮ ಮುಂದಿನ ಕ್ರಮ ಜರುಗಿಸುತ್ತೆ.

ಕರ್ನಾಟಕ ವಿದ್ಯುತ್ ನಿಗಮ ಹೇಳಿಕೆಯಂತೆ ಕೊಡಸಳ್ಳಿ ಅಣೆಕಟ್ಟಿಗೆ 1994ರ ವೇಳೆಗೆ ನೀರು ಶೇಖರಣೆ ಮಾಡುವ ಗುರಿ ಹೊಂದಿರುವ ಕಾರಣ, ಆ ವೇಳೆಗೆ ನಿರಾಶ್ರಿತ ಕೇಂದ್ರವನ್ನು ಎಲ್ಲಾ ಮೂಲ ಸೌಲಭ್ಯಗಳೊಂದಿಗೆ ಸ್ಥಾಪಿಸಲಾಗುತ್ತೆಂದು ಸಹ ತಿಳಿಸಿರುತ್ತಾರೆ. ಈ ಬಗ್ಗೆ ಸರ್ಕಾರ ನಿಗಾವಹಿಸುತ್ತೆ.

ಜಿಲ್ಲಾ ಪರಿಷತ್ತುಗಳ ಅಸ್ತಿತ್ವದ ನಂತರ ಪ್ರಾರಂಭವಾದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ

431(609). ಡಾ. ವೈ. ನಾಗಪ್ಪ (ಹರಿಹರ):- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಜಿಲ್ಲಾಪರಿಷತ್ತು ಅಸ್ತಿತ್ವಕ್ಕೆ ಬಂದ ನಂತರದ ವರ್ಷಗಳಲ್ಲಿ ಹೊಸದಾಗಿ ಪ್ರಾರಂಭಿಸಲ್ಪಟ್ಟಿರುವ ಸರ್ಕಾರಿ ಮತ್ತು ಖಾಸಗಿ ಪ್ರೌಢಶಾಲೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮತ್ತು ವರ್ಷಾವಾರು ಅಂಕಿ ಸಂಖ್ಯೆಯನ್ನೊದಗಿಸುವುದು)

ಆ) ಜಿಲ್ಲಾಪರಿಷತ್ತುಗಳಿಗೆ ಪ್ರೌಢಶಾಲೆಗಳನ್ನು ಸರ್ಕಾರದ ವತಿಯಿಂದಾಗಲಿ ಅಥವಾ ಖಾಸಗಿ ವತಿಯಿಂದಾಗಲೀ ಪ್ರಾರಂಭಿಸಲು ಅನುಮತಿ ನೀಡುವ ಅಧಿಕಾರವನ್ನು ಎಂದಿನಿಂದ ಸರ್ಕಾರ ಹಿಂತೆಗೆದುಕೊಂಡಿದೆ? ಅಲ್ಲಿಯವರೆಗೂ ಪ್ರಾರಂಭಿಸಲ್ಪಟ್ಟಿರುವ ವರ್ಷವಾರು ಮತ್ತು ಜಿಲ್ಲಾವಾರು ಪ್ರೌಢಶಾಲೆಗಳ ಪಟ್ಟಿಯನ್ನು ಒದಗಿಸುವುದು?

ಇ) 1991-92ನೇ ಶೈಕ್ಷಣಿಕ ಸಾಲಿನಲ್ಲಿ ಜಿಲ್ಲಾಪರಿಷತ್ತು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವ ಸರ್ಕಾರಿ ಮತ್ತು ಖಾಸಗಿ ಶಾಲೆಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಸರ್ಕಾರ ಎಷ್ಟಕ್ಕೆ ಅನುಮತಿ ನೀಡಿದೆ? (ಜಿಲ್ಲಾವಾರು ಮತ್ತು ಆಯಾ ಜಿಲ್ಲೆಯ ತಾಲ್ಲೂಕುವಾರು ಮಾಹಿತಿಯನ್ನೊದಗಿಸುವುದು)

ಈ) ಸರ್ಕಾರದ ಅನುಮತಿ ಪಡೆಯದೆ ಯಾವ ಯಾವ ಜಿಲ್ಲಾಪರಿಷತ್ತಿನವರು ಸರ್ಕಾರದ ವತಿಯಿಂದ ಮತ್ತು ಖಾಸಗಿ ಸಂಸ್ಥೆಗಳಿಗೆ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಅನುಮತಿ ನೀಡಿದೆ? ಜಿಲ್ಲಾಪರಿಷತ್ತಿನ ಈ ನಿಲುವಿಗೆ ಸರ್ಕಾರದ ಧೋರಣೆ ಏನು ತಿಳಿಸುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):-

ಅ)

ಸರ್ಕಾರಿ	ಖಾಸಗಿ	ಒಟ್ಟು
276	1145	1421

(ಜಿಲ್ಲಾವಾರು ಅಂಕಿ ಸಂಖ್ಯೆಯನ್ನು ಆನಂತರ ಒದಗಿಸಲಾಗುವುದು)

ಆ) ಸರ್ಕಾರಿ ಪತ್ರ ಸಂಖ್ಯೆ ಇಡಿ 58 ಯೋಪ್ರೌಶಾ 88 ದಿ: 25-6-1988ರಲ್ಲಿ ಅಧಿಕಾರವನ್ನು ಹಿಂತೆಗೆದುಕೊಂಡಿದೆ.

(ವರ್ಷಾವಾರು ಮತ್ತು ಜಿಲ್ಲಾವಾರು ಪಟ್ಟಿಯನ್ನು ಆನಂತರ ಒದಗಿಸಲಾಗುವುದು)

ಇ) ಜಿಲ್ಲಾಪರಿಷತ್ ಶಿಫಾರಸ್ಸು ಮಾಡಿರುವುದು

ಸರ್ಕಾರಿ	ಖಾಸಗಿ	ಒಟ್ಟು
126	374	500

ಸರ್ಕಾರದ ಮಂಜೂರಾತಿ

120	215	335

(ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿಯನ್ನು ನಂತರ ಒದಗಿಸಲಾಗುವುದು)

ಈ) ಮೈಸೂರು ಜಿಲ್ಲೆ - 02

ಧಾರವಾಡ ಜಿಲ್ಲೆ - 155

ಸರ್ಕಾರದ ಪೂರ್ವಾನುಮತಿ ಪಡೆಯದೆ ಖಾಸಗಿ ಪ್ರೌಢಶಾಲೆಗಳಿಗೆ ಅನುಮತಿ ನೀಡಿರುವ ಜಿಲ್ಲಾಪರಿಷತ್ತಿನ ಕ್ರಮ ಸರಿಯಲ್ಲ, ಆದರೂ ಆ ಶಿಕ್ಷಣ ಸಂಸ್ಥೆಗಳ ಅರ್ಹತೆ ಮತ್ತು ಆ ಸ್ಥಳಗಳಲ್ಲಿ ಶಾಲೆಯ ಅವಶ್ಯಕತೆ ಬಗ್ಗೆ ಪರಿಶೀಲಿಸಿ ಸದರಿ ಸಂಸ್ಥೆಗಳು ಅನುದಾನ ಸಂಹಿತೆಯ ನಿಯಮಗಳಲ್ಲಿನ ಅವಶ್ಯಕತೆಗಳನ್ನು ಪೂರೈಸಿದಲ್ಲಿ ಆ ಸಂಸ್ಥೆಗಳಿಗೆ ಪ್ರೌಢಶಾಲೆ ತೆರೆಯಲು ಅನುಮತಿ ನೀಡುವ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು.

ಬಿಜಾಪುರದಲ್ಲಿ ಮುನ್ಸಿಫ್ ಅಡಿಷನಲ್ ನ್ಯಾಯಾಲಯ ಸ್ಥಾಪನೆ

432(614). ಶ್ರೀ ಮನೋಹರ ಐನಾಪುರ (ಬೆಳೊಳ್ಳಿ):- ಮಾನ್ಯ ಕಾನೂನು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಬಿಜಾಪುರದಲ್ಲಿ ಅಧಿಕ ಮುನ್ಸಿಫ್ ನ್ಯಾಯಾಲಯ ಸ್ಥಾಪಿಸಲು ಮನವಿಯನ್ನು ಸ್ವೀಕರಿಸಲಾಗಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರವು ಮಂಜೂರಾತಿ ನೀಡಲು ಉದ್ದೇಶಿಸಿದೆಯೇ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾನೂನು ಸಚಿವರು):-

ಅ) ಹೌದು.